Ref: CS/SE/2025-26/738 07.02.2026

| | |
|---|---|
| National Stock Exchange of India Ltd.<br>Listing Compliance Department<br>Exchange Plaza, Bandra - Kurla Complex,<br>Bandra (East),<br>MUMBAI - 400 051<br>**Symbol: BEML** | The BSE Limited<br>Listing Compliance Department<br>P.J. Towers, 26th Floor,<br>Dalal Street,<br>MUMBAI - 400 001<br>**Scrip code: 500048** |

Dear Sir / Madam,

**Sub: Newspaper Advertisement**

Pursuant to Regulation 47 of the SEBI (Listing Obligations and Disclosure Requirements) Regulations, 2015, please find enclosed herewith copies of newspaper advertisement regarding the un-audited financial results for the Q3 ended 31.12.2025. published on 07.02.2026 in (i) Financial Express (English - All India Edition) and (ii) Eesanje (Kannada - Bangalore Edition).

This is for your information, please.

Yours faithfully,
for BEML LIMITED

URMI CHAUDHURY — Digitally signed by URMI CHAUDHURY Date: 2026.02.07 23:06:48 +05'30'

Urmi Chaudhury
Company Secretary & Compliance Officer
ICSI Mem No.: A29400
Place: Bengaluru

## ಡಿ.ಕೆ.ರವಿ ಕಾಲದಲ್ಲೇ ಬಯಲಿಗೆ ಬಂದಿತ್ತು

# ಕಾನ್ಫಿಡೆಂಟ್ ಗ್ರೂಪ್ ಅಕ್ರಮ

**ಬೆಂಗಳೂರು, ಫೆ.7–** ಪ್ರಭಾವಿ ನಾಯಕರ ಹೆಸರು ಹೇಳಲಾಗದೆ ಹಾಗೂ ಭಾರೀ ಪ್ರಮಾಣದ ದಂಡಕ್ಕೆ ಹೆದರಿ ರಿಯಲ್ ಉದ್ಯಮಿ ಸಿ.ಜೆ.ರಾಯ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ವದಂತಿಗಳು ಹರಿದಾಡುತ್ತಿದ್ದು, ಈ ಹಿಂದೆ ಅಸಹಜ ಸಾವಿಗೀಡಾದ ಐಎಎಸ್ ಅಧಿಕಾರಿ ಡಿ.ಕೆ.ರವಿ ಅವರ ದಕ್ಷತೆಗೆ ಸಂಬಂಧಿಸಿದ ವಿಡಿಯೋವೊಂದು ವೈರಲ್ ಆಗಿದೆ.

ಡಿ.ಕೆ.ರವಿ ಕೋಲಾರದಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ನಕಲಿ ದಾಖಲೆ ಸೃಷ್ಟಿಸಿ 48 ಎಕರೆ ಸರ್ಕಾರಿ ಜಮೀನನ್ನು ಕಬಳಿಸಿದೆ ಎಂದು ಆರೋಪಿಸಿದರು. ಸರ್ಕಾರಿ ಆಸ್ತಿ ಉಳಿಸಲು ಜನರ ಪರವಾಗಿ ತಾವು ಹೋರಾಟ ನಡೆಸುವುದಾಗಿ ವಿಡಿಯೋ ಬಾರಿ ಚರ್ಚೆಗೆ ಗ್ರಾಸವಾಗಿದೆ.

ಭೂ ಕಬಳಿಕೆದಾರರ ವಿರುದ್ಧ ದಿಟ್ಟ ನಿಲುವು ಹೊಂದಿದ್ದ ಡಿ.ಕೆ.ರವಿ ಅವರನ್ನು ಕೋಲಾರದಿಂದ ವರ್ಗಾವಣೆ ಮಾಡಲಾಗಿತ್ತು. ಬೆಂಗಳೂರಿನಲ್ಲಿ ಅವರು ಅಸಹಜ ಸಾವೀಗಿಡಾಗಿದ್ದರು. ಸಿಬಿಐ ತನಿಖೆ ನಡೆದು ಆತ್ಮಹತ್ಯೆ ಎಂದು ಹೇಳಿ ಕೈ ತೊಳೆದುಕೊಂಡಿತ್ತು. ಪ್ರಕರಣದಲ್ಲಿ ಕೆಲಸ ಪ್ರಭಾವಿಗಳ ಹೆಸರು ತಳುಕು ಹಾಕಿಕೊಂಡಿತ್ತು. ಸಿಬಿಐ ವರದಿಯ ಬಳಿಕ ಎಲ್ಲರೂ ಎದೆಯುಬ್ಬಿಸಿ ತಮ್ಮ ವಿರುದ್ಧ ರಾಜಕೀಯ ಷಡ್ಯಂತ್ರ ನಡೆದಿತ್ತು ಎಂದು ಹೇಳಿಕೊಂಡರು. ಅಲ್ಲಿಗೆ ಡಿ.ಕೆ.ರವಿ ಅವರ ಆತ್ಮಹತ್ಯೆ ಮುಗಿದ ಅಧ್ಯಾಯವಾಗಿತ್ತು.

ಈಗ ಸಿ.ಜೆ.ರಾಯ್ ಆತ್ಮಹತ್ಯೆ ಸಂದರ್ಭದಲ್ಲಿ ಡಿ.ಕೆ.ರವಿ ಅವರ ವಿಡಿಯೋ ವೈರಲ್ ಆಗಿರುವುದು ನಾನಾ ರೀತಿಯ ಚರ್ಚೆಗಳು ಹುಟ್ಟು ಹಾಕಿದೆ. ಯಾವುದೇ ಸಾಲ ಮಾಡದೇ 10 ಸಾವಿರ ಕೋಟಿ ರೂಪಾಯಿಯ ಉದ್ಯಮ ಕಟ್ಟಲಾಗಿತ್ತು ಎಂದು ಸಿ.ಜೆ.ರಾಯ್ ಅವರನ್ನು ಹೊಗಳಲಾಗುತ್ತಿದೆ. ಅವರ ಪರಿಶ್ರಮದ ಬಗ್ಗೆ ಮೆಚ್ಚುಗೆಯ ಮಾತುಗಳು ಕೇಳಿ ಬರುತ್ತಿವೆ.

ಆದರೆ ರಾಯ್ ಅವರ ಆರಂಭದಲ್ಲಿ ಸಾಧಾರಣವಾದ ಶ್ರಮಿಕ ವರ್ಗಕ್ಕೆ ಸೇರಿದ್ದರು. ಕೇರಳ ಮೂಲದ ನಂಬೂದಿರಿ ಕುಟುಂಬದ ಆಪ್ತತೆ ಅವರಿಗೆ ಅನಾಮತ್ ಆಸ್ತಿಗಳನ್ನು ಒದಗಿಸಿಕೊಟ್ಟಿತ್ತು. ಅನಂತರ ರಾಜಕಾರಣಿಗಳ ಬೇನಾಮಿ ಹಾಗೂ ಜಂಟಿ ಹೂಡಿಕೆಯೊಂದಿಗೆ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಉನ್ನತಿಗಳಿಸಿದರು ಎಂದು ಹೇಳಲಾಗುತ್ತಿದೆ. ರಾಜಕಾರಣಿಗಳೇ ಪಾಲುದಾರರಾದಾಗ ಸರ್ಕಾರಿ ದಾಖಲೆಗಳ ಹಾಗೂ ಇತರೆ ಕೆಲಸಗಳು ಸಲೀಸಾಗಿ ನಡೆಯುತ್ತವೆ. ಬಂಗಾರಪೇಟೆಯಲ್ಲಿ 48 ಎಕರೆ ಒತ್ತುವರಿ ಮಾಡಲಾಗಿದೆ ಎಂದು ಡಿ.ಕೆ.ರವಿಯವರು ಹೇಳಿದ್ದ ಜಾಗದಲ್ಲಿ ಈಗ ಐಷಾರಾಮಿ ಗಾಲ್ಫ್ ಕ್ಲಬ್ ತಲೆ ಎತ್ತಿದೆ. ಆಡಳಿತ ಪಕ್ಷದ ಶಾಸಕರು ಗಾಲ್ಫ್ ಕ್ಲಬ್‌ಗಾಗಿ ಯಾವುದೇ ಒತ್ತುವರಿಯಾಗಿಲ್ಲ. ಪಿತ್ರಾರ್ಜಿತ ಆಸ್ತಿಗಳನ್ನು ಖರೀದಿಸಲಾಗಿದೆ ಎಂದು ವಿಧಾನಸಭೆಯಲ್ಲಿ ಒಂದೂವರೆ ಗಂಟೆ ಸಮರ್ಥಿಸಿಕೊಂಡಿದ್ದರು. ತಮ್ಮದೇ ಪಕ್ಷದ ಸಚಿವರ ವಿರುದ್ಧ ಗಂಭೀರ ಆರೋಪ ಮಾಡಿದ್ದರು. ಅದು ನಂತರದ ದಿನಗಳಲ್ಲಿ ಸದರಿ ಸಚಿವರು ಮತ್ತು ಶಾಸಕರ ನಡುವೆ ಮುಸುಕಿನ ಗುದ್ದಾಟಕ್ಕೂ ಇದು ಕಾರಣವಾಗಿದೆ. ಸಿ.ಜೆ.ರಾಯ್ ಗಾಲ್ಫ್ ಕ್ಲಬ್ ಹಾಗೂ ಸುತ್ತಮುತ್ತಲ ಜಮೀನಿಗೆ ಪಾಲುದಾರರು ಎಂದು ಶಾಸಕರೇ ಹೇಳಿದ್ದರು.

ಈಗ ಸಿ.ಜೆ.ರಾಯ್ ಆತ್ಮಹತ್ಯೆ ಮಾಡಿಕೊಂಡ ಬಳಿಕ ಡಿ.ಕೆ.ರವಿ ಹೇಳಿಕೆ ಸದ್ದು ಮಾಡುತ್ತಿದೆ. ಮತ್ತೊಂದೆಡೆ ಕೇರಳ ವಿಧಾನಸಭೆ ಚುನಾವಣೆಯ ಸಂಪನ್ಮೂಲ ಕ್ರೋಢೀಕರಣದ ವದಂತಿಗಳು ಹರಿದಾಡುತ್ತಿವೆ. ರಾಜ್ಯದ ಪ್ರಭಾವಿ ಕಾಂಗ್ರೆಸ್ ನಾಯಕರ ಆಜ್ಞೆಯ ಮೇರೆಗೆ ಕೇರಳ ಚುನಾವಣೆಗೆ ಅನಧಿಕೃತವಾಗಿ ಕೋಟ್ಯಂತರ ರೂಪಾಯಿಗಳನ್ನು ರವಾನೆ ಮಾಡಲಾಗಿತ್ತು. ಕಳೆದ ಡಿಸೆಂಬರ್ ನಲ್ಲಿ ಈ ಬಗ್ಗೆ ಮಾಹಿತಿ ಪಡೆದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ಮಾಡಿದ್ದರು. ಒಂದೊಂದೇ ಸ್ಪಷ್ಟನೆ ಕೇಳಲು ಪದೇ ಪದೇ ವಿಚಾರಣೆ ನಡೆಸುತ್ತಿದ್ದರು. ಇದರಿಂದ ಜರ್ಜರಿತರಾಗಿದ್ದ ರಾಯ್, ಪ್ರಭಾವಿ ನಾಯಕರ ಹೆಸರು ಹೇಳಲಾಗದೆ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎನ್ನಲಾಗಿದೆ.

ಜೊತೆಗೆ ಎದುರಾಳಿಗಳಿಗೂ ಹಣಕಾಸಿನ ಸೌಲಭ್ಯ ಒದಗಿಸಬೇಕು ಎಂಬ ಆಗ್ರಹ ಇತ್ತು. ಒಂದು ವೇಳೆ ಹಣಕಾಸಿನ ಸೌಲಭ್ಯ ಮಾಡಿಕೊಡದೆ ಇದ್ದರೆ ಸಾವಿರಾರು ಕೋಟಿ ರೂಪಾಯಿಗಳನ್ನು ದಂಡದ ರೂಪದಲ್ಲಿ ಪಾವತಿ ಮಾಡಬೇಕಿದೆ ಎಂದು ಎಚ್ಚರಿಸಲಾಗಿತ್ತು ಎನ್ನಲಾಗಿದೆ.

ರಾಯ್ ಆತ್ಮಹತ್ಯೆ ಮಾಡಿಕೊಂಡು ವಾರ ಕಳೆದಿದೆ. ಠಾಣೆಯ ಇನ್‌ಸ್ಪೆಕ್ಟರ್ ಹಂತದಲ್ಲೇ ತನಿಖೆಯಾಗಬೇಕಿದ್ದ ಪ್ರಕರಣಕ್ಕೆ ರಾಜ್ಯ ಸರ್ಕಾರ ಮೂವರು ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿ ರಚನೆ ಮಾಡಿದೆ. ಆದರೆ ಈವರೆಗೂ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಪ್ರಕರಣದ ದಿಕ್ಕನ್ನು ಬದಲಿಸುವ ಸಲುವಾಗಿಯೇ ಎಸ್‌ಐಟಿ ರಚನೆ ಮಾಡಲಾಗಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ಇದಕ್ಕೆ ಪೂರಕವಾಗಿ ಆತ್ಮಹತ್ಯೆಗೆ ಇನ್ನೂ ನಿಗೂಢವಾಗಿದೆ. ನಾನಾ ರೀತಿಯ ವದಂತಿಗಳು ಹಬ್ಬುತ್ತಿವೆ. ಸಿ.ಜೆ.ರಾಯ್ ಪ್ರಾಮಾಣಿಕ, ದಕ್ಷ ಎನ್ನುವ ಚರ್ಚೆಗಳ ನಡುವೆ ಡಿ.ಕೆ.ರವಿ ಹೇಳಿಕೆಯ ವೈರಲ್ ವಿಡಿಯೋ ಆಸ್ತಿ ಸಂಪಾದನೆಯ ಮಾರ್ಗಗಳನ್ನು ಅನುಮಾನದಿಂದ ನೋಡುವಂತೆ ಮಾಡಿದೆ.

## ಫೆ.14ರಂದು ನಂದಿ ಗಿರಿಧಾಮಕ್ಕೆ
# ಪ್ರವೇಶ ನಿರ್ಬಂಧ



**ಚಿಕ್ಕಬಳ್ಳಾಪುರ, ಫೆ.7–** ಪ್ರೇಮಿಗಳ ದಿನದಂದು ಇತಿಹಾಸ ಪ್ರಸಿದ್ಧ ತಾಲ್ಲೂಕಿನ ನಂದಿ ಗಿರಿಧಾಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಪ್ರೇಮಿಗಳು ಆಗಮಿಸುವ ಸಾಧ್ಯತೆ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಫೆ.14ರಂದು ಪ್ರವೇಶ ನಿರ್ಬಂಧಿಸಲಾಗಿದೆ.

ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ನಂದಿ ಗಿರಿಧಾಮಕ್ಕೆ ಭೇಟಿ ನೀಡಿ ಪ್ರಕೃತಿ ಸೌಂದರ್ಯ ಸವಿಯುತ್ತಿದ್ದಾರೆ. ಅದರಲ್ಲೂ ವೀಕೆಂಡ್‌ನಲ್ಲಿ ಜನಜಾತ್ರೆಯೇ ಸೇರುತ್ತದೆ. ಪ್ರೇಮಿಗಳ ದಿನದಂದು ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಮಿಗಳು ಆಗಮಿಸುವ ಸಾಧ್ಯತೆಯಿದ್ದು, ಮುಂಜಾಗ್ರತಾ ಕ್ರಮವಾಗಿ ಅಂದು ಬೆಳಗ್ಗೆ 6 ರಿಂದ ಸಂಜೆ 6ರ ವರೆಗೆ ಬೆಟ್ಟಕ್ಕೆ ಪ್ರವೇಶವನ್ನು ನಿರ್ಬಂಧಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

## ಬೆಂಗಳೂರಿನಿಂದ ಧಾರವಾಡಕ್ಕೆ ತೆರಳುತ್ತಿದ್ದ ಟ್ರಕ್‌ನಲ್ಲಿ
# 24 ಲಕ್ಷ ಮೌಲ್ಯದ ಮೊಬೈಲ್, ಔಷಧ ಬಾಕ್ಸ್ ಕಳವು

**ಬೆಂಗಳೂರು, ಫೆ.7–** ಟ್ರಕ್ ಚಾಲಕನ ಗಮನ ಬೇರೆಡೆ ಸೆಳೆದು ಅದರಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಮೊಬೈಲ್ ಹಾಗೂ ಇತರ ವಸ್ತುಗಳನ್ನು ಕಳ್ಳರು ದೋಚಿರುವ ಘಟನೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಕಾಕೋಳ ಸಮೀಪ ನಡೆದಿದೆ.

ಕಳೆದ ಜನವರಿ 1ರಂದು ಈ ಘಟನೆ ನಡೆದಿದ್ದು, ಕಳ್ಳರ ಕೈಚಳಕ ಕಂಡು ಸ್ಥಳೀಯರು ಬೆಚ್ಚಿಬಿದ್ದಿದ್ದಾರೆ.

ಇತ್ತೀಚೆಗೆ ಬೆಳಗಾವಿ ಸಮೀಪ 400 ಕೋಟಿ ರೂ. ಹಣ ಸಾಗಿಸುತ್ತಿದ್ದ ಎರಡು ಕಂಟೈನರ್ ಟ್ರಕ್‌ಗಳನ್ನು ಹೈಜಾಕ್ ಮಾಡಿದ ಘಟನೆ ಮಾಸುವ ಮುನ್ನವೇ ಇದು ನಡೆದಿರುವುದು ಆತಂಕ ಮೂಡಿಸಿದೆ.

ಬೆಂಗಳೂರಿನಿಂದ ಧಾರವಾಡಕ್ಕೆ ಟ್ರಕ್‌ನಲ್ಲಿ ಫ್ಲಿಪ್‌ಕಾರ್ಟ್ ಕಂಪೆನಿಗೆ ಸೇರಿದ ಮೊಬೈಲ್‌ಗಳು ಸೇರಿದಂತೆ ಕೆಲ ಔಷಧ, ಆಹಾರ ಪದಾರ್ಥಗಳನ್ನು ಸಾಗಿಸಲಾಗುತ್ತಿತ್ತು.

ರಾಣೇಬೆನ್ನೂರಿನ ಕಾಕೋಳದಿಂದ ಮೋಟೇಬೆನ್ನೂರು ಮಧ್ಯೆ ಟ್ರಕ್ ಚಲಿಸುವಾಗ ಮಧ್ಯರಾತ್ರಿ 1 ಗಂಟೆ ಸಂದರ್ಭದಲ್ಲಿ ಅಪರಿಚಿತ ದುಷ್ಕರ್ಮಿಗಳು ಅದರಲ್ಲಿದ್ದ ಆರು ಬಾಕ್ಸ್‌ಗಳನ್ನು ಸಿನಿಮೀಯ ರೀತಿಯಲ್ಲಿ ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ.

ವಿಶೇಷವೆಂದರೆ, ಚೋರರು ಟ್ರಕ್‌ನಲ್ಲಿದ್ದ ವಸ್ತುಗಳನ್ನು ಒಡೆದು ತೆರೆಯುತ್ತಿದ್ದಂತೆಯೇ ಮಾಲೀಕರಿಗೆ ಮೆಸೇಜ್ ಹೋಗಿದೆ. ನಂತರ ಮಾಲೀಕರು ಟ್ರಕ್ ಚಾಲಕ ಮಲಿಕಾಜಾನ್ ಮುಲ್ಲಾಗೆ ಕರೆ ಮಾಡಿ ವಿಚಾರಿಸಿದಾಗ ಆತ ಆತಂಕಗೊಂಡು ಲಾರಿಯನ್ನು ಪಕ್ಕಕ್ಕೆ ನಿಲ್ಲಿಸಿ ನೋಡಿದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ.

ಈ ವಸ್ತುಗಳನ್ನು ಧಾರವಾಡದ ಕೊಟ್ಬೂರು ಗ್ರಾಮದ ಫ್ಲಿಪ್‌ಕಾರ್ಟ್ ವೇರ್‌ಹೌಸ್‌ಗೆ ಸಾಗಿಸಲಾಗುತ್ತಿತ್ತು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸುಮಾರು 24 ಲಕ್ಷ ರೂ. ಮೌಲ್ಯದ ವಸ್ತುಗಳು ಕಳುವಾಗಿದ್ದು, ಈ ಬಗ್ಗೆ ರಾಣೇಬೆನ್ನೂರು ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಈ ಹೆದ್ದಾರಿಯಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತವೆ. ಇದರ ನಡುವೆ ಈ ಕಳ್ಳತನ ನಡೆದಿರುವುದು ಭಾರೀ ಕುತೂಹಲ ಕೆರಳಿಸಿದೆ.

ಪ್ರಕರಣ ಕೂಡ ತಡವಾಗಿ ಬೆಳಕಿಗೆ ಬಂದಿದ್ದು, ಎಸ್‌ಪಿ ಯಶೋಧಾ ವಂಟಗೋಡಿ ಅವರು ಪ್ರಕರಣ ಕುರಿತು ವಿಶೇಷ ತಂಡ ರಚಿಸಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

## ಬಸ್‌ಗೆ ಟ್ರಕ್ ಡಿಕ್ಕಿ
# 6 ಜನರ ಸಾವು

**ಮಥುರಾ, ಫೆ.7–** ಉತ್ತರ ಪ್ರದೇಶದ ಯಮುನಾ ಎಕ್ಸ್‌ಪ್ರೆಸ್ ರಸ್ತೆಯಲ್ಲಿ ಕಂಟೈನರ್ ಟ್ರಕ್‌ವೊಂದು ಪ್ರಯಾಣಿಕರಿದ್ದ ಬಸ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅದರಲ್ಲಿದ್ದ ಆರು ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಸುರೇರ್ ಪೊಲೀಸ್ ಠಾಣೆ ಪ್ರದೇಶದಲ್ಲಿ ಬೆಳಗಿನ ಜಾವ 2.45 ರ ಸುಮಾರಿಗೆ ಈ ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನೋಯ್ಡಾದಿಂದ ಕಾನ್ಪುರದ ರಸುಲಾಬಾದ್‌ಗೆ ಹೋಗುತ್ತಿದ್ದ ಬಸ್ ಪ್ರಯಾಣಿಕರು ಶೌಚಾಲಯಕ್ಕೆ ಹೋಗಲು ನಿಲ್ಲಿಸಿದ್ದಾಗ ಪಕ್ಕದಿಂದ ಕಂಟೇನರ್ ಟ್ರಕ್ ಡಿಕ್ಕಿ ಹೊಡೆದಿದೆ.

ಸ್ಥಳದಲ್ಲೇ 6 ಜನ ಕೊನೆಯುಸಿರೆಳೆದರೆ,ವ್ಯಕ್ತಿಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಸ್ಥಿರವಾಗಿದೆ ಮತ್ತು ಬಸ್ ಚಾಲಕ ಮತ್ತು ಟ್ರಕ್ ಚಾಲಕ ಪರಾರಿಯಾಗಿದ್ದಾರೆ.ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



**ಕೆಆರ್ ಪುರದ ದೇವಸಂದ್ರದಲ್ಲಿ ಸಮಾಜ ಸೇವಕ ಕೇಶವ ಅವರು ಬಡವರಿಗೆ ಉಚಿತವಾಗಿ ಅವಶ್ಯಕ ಮೆಡಿಸನ್ ಹಾಗೂ ಕನ್ನಡಕಗಳನ್ನು ವಿತರಿಸಿದರು. ಧನುಷ್, ರಘು ಮತ್ತಿತರರು ಈ ಸಂದರ್ಭದಲ್ಲಿದ್ದರು.**

## ಮೈಸೂರಿನಲ್ಲಿ ಬೆಳ್ಳಂಬೆಳಗ್ಗೆ ಒತ್ತುವರಿ ತೆರವು

**ಮೈಸೂರು,ಫೆ. 7–** ಬೆಳ್ಳಂಬೆಳಗ್ಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಒತ್ತುವರಿದಾರರಿಗೆ ಬಿಸಿ ಮುಟ್ಟಿಸಿದೆ.

ವಿಜಯನಗರದ 3ನೇ ಹಂತದಲ್ಲಿ ಒತ್ತುವರಿ ಮಾಡಿಕೊಂಡಿದ್ದ 140 ಕೋಟಿ ರೂ. ಮೌಲ್ಯದ 7 ಎಕರೆ ಜಮೀನನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ನೇತೃತ್ವದಲ್ಲಿ ವಿಜಯನಗರ ಠಾಣೆ ಪೊಲೀಸರ ಸಹಯೋಗದೊಂದಿಗೆ ಕಾರ್ಯಾಚರಣೆ ನಡೆಸಿ ತಮ್ಮ ಆಸ್ತಿಯನ್ನು ವಶಪಡಿಸಿಕೊಂಡಿದ್ದಾರೆ. ಪ್ರಾಧಿಕಾರದ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಶೆಡ್‌ಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಗಿದೆ.

## ಎಸ್.ಮನೋಹರ್‌ಗೆ ರಾಜ್ಯ ಸಚಿವ ಸಂಪುಟ ಸ್ಥಾನಮಾನಕ್ಕೆ ಸಂತಸ



**ಬೆಂಗಳೂರು, ಫೆ.7–** ಮೈಸೂರು ಎಲೆಕ್ಟ್ರಿಕಲ್ಸ್ ಇಂಡಸ್ಟ್ರೀಸ್ ಲಿ. ಅಧ್ಯಕ್ಷರಾದ ಎಸ್.ಮನೋಹರ್ ಅವರಿಗೆ ರಾಜ್ಯ ಸಂಪುಟ ದರ್ಜೆ ಸ್ಥಾನಮಾನ ಘೋಷಿಸಿರುವುದು ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತನಿಗೆ ಸಂದಿರುವ ಫಲ ಎಂದು ಅವರ ಬೆಂಬಲಿಗರು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಿಂದ ಹಿಡಿದು ಕೆಪಿಸಿಸಿ ಪ್ರ.ಕಾರ್ಯದರ್ಶಿವರೆಗೆ ಪಕ್ಷದಲ್ಲಿ ಸೇವೆ ಸಲ್ಲಿಸಿ, ನಿರಂತರವಾಗಿ ಹೋರಾಟಗಳಲ್ಲಿ ಭಾಗವಹಿಸಿ, ಪಕ್ಷದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದ ಮನೋಹರ್ ಅವರು ಕಳೆದ ಕಾಂಗ್ರೆಸ್ ಸರ್ಕಾರದಲ್ಲಿ ಕರ್ನಾಟಕದ ವಿದ್ಯುತ್ ಕಾರ್ಖಾನೆ ಅಧ್ಯಕ್ಷರಾಗಿದ್ದರು. ಈ ಬಾರಿ ಮೈಸೂರು ಎಲೆಕ್ಟ್ರಿಕಲ್ ಲಿಮಿಟೆಡ್ ಅಧ್ಯಕ್ಷರಾಗಿ ಆಯ್ಕೆಯಾಗಿ ದಕ್ಷವಾಗಿ ಸೇವೆ ಸಲ್ಲಿಸುತ್ತಿದ್ದರು. ಪ್ರಸ್ತುತ ರಾಜ್ಯ ಸರ್ಕಾರ ಅವರಗೆಇ ಸಚಿವ ಸಂಪುಟ ದರ್ಜೆ ಸ್ಥಾನಮಾನ ನಿಡರುವುದು ಅವರ ಹೋರಾಟಕ್ಕೆ ಸಂದ ಫಳ ಎಂದು ಅಭಿಮಾನಿಗಳು, ಬೆಂಬಲಿಗರರು ಹರ್ಷ ವ್ಯಕ್ತಪಡಿಸಿದ್ದಾರೆ.

## ಮೂವರು ಅಪರಾಧಿಗಳಿಗೆ
# ಫೆ.16ಕ್ಕೆ ಶಿಕ್ಷೆ ಪ್ರಕಟ

**ಗಂಗಾವತಿ,ಫೆ.7–** ವಿದೇಶಿ ಪ್ರಜೆ ಸೇರಿದಂತೆ ಇಬ್ಬರು ಮಹಿಳೆಯರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಹಂಪಿ ಬಳಿ ಪುರುಷ ಪ್ರವಾಸಿಯ ಹತ್ಯೆ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ದೋಷಿಗಳು ಎಂದು ಕೊಪ್ಪಳ ಜಿಲ್ಲೆಯ ನ್ಯಾಯಾಲಯವು ತೀರ್ಪು ನೀಡಿದೆ.

ಅಪರಾಧಿಗಳ ವಾದಗಳನ್ನು ಆಲಿಸಿದ ನಂತರ ನ್ಯಾಯಾಲಯವು ಫೆ.16ರಂದು ಶಿಕ್ಷೆಯನ್ನು ಪ್ರಕಟಿಸಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಘಟನೆ ಕಳೆದ ವರ್ಷ ಮಾರ್ಚ್‌ನಲ್ಲಿ ವಿಶ್ವ ಪರಂಪರೆಯ ತಾಣ ಹಂಪಿಯ ಬಳಿಯ ಸಣಾಪುರದ ತುಂಗಭದ್ರಾ ಎಡದಂಡೆ ಕಾಲುವೆಯ ಬಳಿ ಸಂಭವಿಸಿತ್ತು.

ಪೊಲೀಸರ ಪ್ರಕಾರ, ಶಿಕ್ಷೆಗೊಳಗಾದ ಮೂವರು ಮಾರ್ಚ್ 6, 2025ರ ರಾತ್ರಿ ಬದುಕುಳಿದ ಇಬ್ಬರು ಮಹಿಳೆಯರು, ಇಸ್ರೇಲಿ ಪ್ರವಾಸಿ ಮತ್ತು ಹೋಂ ಸ್ಟೇ ನಿರ್ವಾಹಕರು ಮತ್ತು ಇತರ ಮೂವರು ಪುರುಷ ಪ್ರವಾಸಿ ಸ್ನೇಹಿತರನ್ನು ಸಂಪರ್ಕಿಸಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು.

ಹಣವನ್ನು ನಿರಾಕರಿಸಿದಾಗ, ಮೂವರು ಪುರುಷ ಪ್ರವಾಸಿಗರನ್ನು ಕಾಲುವೆಗೆ ತಳ್ಳಿ ಹಲ್ಲೆ ನಡೆಸಿ, ಇಸ್ರೇಲಿ ಪ್ರವಾಸಿ ಮತ್ತು ಹೋಂ ಸ್ಟೇ ನಿರ್ವಾಹಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ಕಾಲುವೆಗೆ ತಳ್ಳಲ್ಪಟ್ಟವರಲ್ಲಿ ಇಬ್ಬರು ಪುರುಷರು ಈಜು ದಡ ಸೇರುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಒಡಿಶಾದ ಪ್ರವಾಸಿಯೊಬ್ಬರು ಕಾಲುವೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಕೊಲೆ, ಸಾಮೂಹಿಕ ಅತ್ಯಾಚಾರ, ಕೊಲೆಯತ್ನ ಮತ್ತು ದರೋಡೆ ಸೇರಿದಂತೆ ಅಪರಾಧಗಳಿಗೆ ಮಲ್ಲೇಶ್, ಸಾಯಿ ಮತ್ತು ಶರಣಪ್ಪ ಅವರನ್ನು ಶುಕ್ರವಾರ ನ್ಯಾಯಾಲಯವು ದೋಷಿಗಳೆಂದು ತೀರ್ಪು ನೀಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಕಾಳಸಂತೆಯಲ್ಲಿ ಗೊಬ್ಬರ ಮಾರಾಟ: ಗೋದಾಮಿನ ಮೇಲೆ ಅಧಿಕಾರಿಗಳ ದಾಳಿ

**ಬಳ್ಳಾರಿ, ಫೆ.7–** ಕಾಳಸಂತೆಯಲ್ಲಿ ಗೊಬ್ಬರ ಮಾರಾಟ ಧಂದೆಯನ್ನ ಅಧಿಕಾರಿಗಳು ಇಲ್ಲಿ ಬಯಲಿಗೆಳೆದಿದ್ದಾರೆ.

ಬಳ್ಳಾರಿ ನಗರ ಹೊರವಲಯದ ಕೈಗಾರಿಕಾ ಪ್ರದೇಶದ ಗೋದಾಮಿನಲ್ಲಿ ಸಂಗ್ರಹಿಸಿದ್ದ ಭಾರೀ ಪ್ರಮಾಣದ ಗೊಬ್ಬರದ

ಮೂಟೆಗಳನ್ನು ಪತ್ತೆಹಚ್ಚಿದ ಅಧಿಕಾರಿಗಳ ತಂಡ ಬೆಚ್ಚಿ ಬಿದ್ದಿದೆ. ಪೊಲೀಸರೊಂದಿಗೆ ನಡೆದ ಜಂಟಿ ಕಾರ್ಯಾಚರಣೆ ವೇಳೆ ಸಂಗ್ರಹಿಸಿದ್ದ ದಾಸ್ತಾನನ್ನು ಜಪ್ತಿ ಮಾಡಲಾಗಿದ್ದು, ಗೋದಾಮಿನ ಮಾಲೀಕರ ಮೇಲೆ ಪ್ರಕರಣ ದಾಖಲಾಗಿದೆ. ಸುಮಾರು 4 ಸಾವಿರಕ್ಕೂ ಅಧಿಕ ಚೀಲ ಯೂರಿಯಾ ಗೊಬ್ಬರ ಪತ್ತೆಯಾಗಿದ್ದು, ಗೋದಾಮು ಮಾಲೀಕನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ರೈರರಿಗೆ ಹಂಚಿಕೆ ಮಾಡಲಾಗದೇ ಕಾಳಸಂತೆಯಲ್ಲಿ ಇದನ್ನು ಮಾರಾಟ ಮಾಡಲು ಯತ್ನಿಸಲಾಗುತ್ತಿತ್ತು ಎಂದು ಮೂಲಗಳು ತಿಳಿಸಿವೆ.

ಬಳ್ಳಾರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಮೂಲಗಳ ಪ್ರಕಾರ ಇದು ಸರ್ಕಾರದಿಂದ ರೈತರಿಗೆ ಹಂಚಿಕೆ ಮಾಡಲು ತಂದಿದ್ದ ಮಾಲು ಎಂದು ಹೇಳಲಾಗುತ್ತಿದೆ.

**LAND FOR SALE**
**6 acre**
**Non conversion**
**General property**
**Yellow zone,**
**Muda limits**
**Nagavala village,**
**ilvala hobli, Mysore.**
Anybody interested contact
94499 87859 / 70199 08097
Ro.No.1539

**ಪುರಸಭಾ ಕಾರ್ಯಾಲಯ, ದೇವನಹಳ್ಳಿ**
ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂರವಾಣಿ : 080–27682221, Email : itstaff_ulb_devanahalli@yahoo.co.in
ನಂ.ದೇಪು/ತಾ.ಶಾ/ಟೆಂಡರ್/ಸಿಆರ್/09/2025–26 ದಿನಾಂಕ:06.02.2026

**ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್(ಕೆ.ಪಿ.ಪಿ.ಪಿ ಪೋರ್ಟಲ್) ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW-1 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ 15ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದಡಿ ಕಾಮಗಾರಿಯ ಒಟ್ಟು ಮೊತ್ತ ರೂ : **9.94 ಲಕ್ಷಗಳ** ಒಟ್ಟು 01 ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ದೇವನಹಳ್ಳಿ
ವಾಸಾಸಂಇ/ವಾಪ್ರ/ಶಿರಡಿ ಸಾಯಿ/5495/2025–26
ಸಹಿ/– ಮುಖ್ಯಾಧಿಕಾರಿ, ಪುರಸಭೆ, ದೇವನಹಳ್ಳಿ
Ro.No.1533

**ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.,**
(ಷೆಡ್ಯೂಲ್ಡ್ ಬ್ಯಾಂಕ್)
ಕೋರಮಂಗಲ ಶಾಖೆ: ನಂ: 28/ಎ, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034.
ದೂ: 080–22976680. ಮೊಬೈಲ್ ನಂ: 9108051817.
ವ್ಯ/ಕೋ.ಶಾ.01/2025–26 ದಿನಾಂಕ: 06/02/2026

**ಹರಾಜು ಪ್ರಕಟಣೆ**

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ ನಮ್ಮ ಕೋರಮಂಗಲ ಶಾಖೆಯಲ್ಲಿ ಈ ಕೆಳಕಂಡ ಗ್ರಾಹಕರು ಚಿನ್ನಾಭರಣಗಳನ್ನು ಒತ್ತೆಯಿಟ್ಟು ಸಾಲ ಪಡೆದು, ಬಡ್ಡಿ ಪಾವತಿಸದೇ ಸಾಲವು ಸುಸ್ತಿಯಾಗಿದ್ದು ಹಲವು ನೋಟೀಸುಗಳನ್ನು ನೀಡಿದಾಗ್ಯೂ ಬಡ್ಡಿಯನ್ನು ಪಾವತಿಸದಿರುವ ಪ್ರಯುಕ್ತ **ದಿನಾಂಕ: 23–02–2026ರ ಸೋಮವಾರ ಮಧ್ಯಾಹ್ನ 3–00 ಗಂಟೆಗೆ** ಕೆಳಕಂಡ ಸಾಲಗಾರರ ಒಡವೆಗಳನ್ನು ಬ್ಯಾಂಕಿನ ನಮ್ಮ ಶಾಖಾ ಆವರಣದಲ್ಲಿ ಹರಾಜು ಮಾಡಲಾಗುವುದು. ಈ ಸಂಬಂಧದಲ್ಲಿ ಬ್ಯಾಂಕಿಗೆ ಆಗಬಹುದಾದ ಯಾವುದೇ ಖರ್ಚು–ನಷ್ಟಗಳಿಗೆ ಸದರಿ ಸಾಲಗಾರರೇ ಜವಾಬ್ದಾರರಾಗಿರುತ್ತಾರೆ. ಆಸಕ್ತಿಯುಳ್ಳವರು ಬ್ಯಾಂಕಿನ ನಿಯಮಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದು. ಬಿಡ್ಡನ್ನು ಒಪ್ಪಿಕೊಳ್ಳುವ ಅಥವಾ ನಿರಾಕರಿಸುವ ಹಕ್ಕು ಬ್ಯಾಂಕಿನ ಶಾಖಾ ವ್ಯವಸ್ಥಾಪಕರಿಗೆ ಇರುತ್ತದೆ. ಒಂದು ವೇಳೆ ಹರಾಜು ದಿನಾಂಕದಂದು ಸಾರ್ವತ್ರಿಕ ರಜಾ ದಿನವಾದಲ್ಲಿ ಹರಾಜನ್ನು ಮರು ದಿನ ನಡೆಸಲಾಗುವುದು.

| ಕ್ರಮ ಸಂಖ್ಯೆ | ಖಾತೆ ಸಂಖ್ಯೆ | ಸಾಲಗಾರರ ಹೆಸರು ಮತ್ತು ವಿಳಾಸ | ಒಡವೆ ತೂಕ (ಗ್ರಾಂ.ಗಳಲ್ಲಿ) |
|---|---|---|---|
| 1. | 3944 | ಮರಿಸಿದ್ದಯ್ಯ, ಬಿನ್ ಮಂಚಯ್ಯ, ಬೊಪ್ಪೇಗೌಡನಪುರ ಹೋಬಳಿ, ಮಳವಳ್ಳಿ ತಾಲ್ಲೂಕು, ಚಿಕ್ಕ ಹೆಬ್ಬಾಗಿಲು, ಮಂಡ್ಯ–571463. | 2.500 |

ಸಹಿ/–
ಶಾಖಾ ವ್ಯವಸ್ಥಾಪಕರು,
ಕ.ರಾ.ಸ. ಅಪೆಕ್ಸ್ ಬ್ಯಾಂಕ್, ಕೋರಮಂಗಲ ಶಾಖೆ, ಬೆಂಗಳೂರು–560 034.
Ro.No.1537

बी ई एम एल
BEML Beyond Possibilities
**ಬಿಇಎಂಎಲ್ ಲಿಮಿಟೆಡ್**
(ಸಿಐಎನ್: ಎಲ್35202ಕೆಎ1964ಜಿಓಐ001530)
(ರಕ್ಷಣಾ ಸಚಿವಾಲಯದಡಿಯಲ್ಲಿ ಶೆಡ್ಯೂಲ್ 'ಎ' ಕಂಪನಿ)
ನೋಂದಾಯಿತ ಕಛೇರಿ: "ಬಿಇಎಂಎಲ್ ಸೌಧ", 23/1, 4ನೇ ಮುಖ್ಯ ರಸ್ತೆ, ಎಸ್.ಆರ್. ನಗರ, ಬೆಂಗಳೂರು – 560 027.
ದೂರವಾಣಿ: (080) 22963142. ಈ–ಮೇಲ್: cs@beml.co.in, ವೆಬ್‌ಸೈಟ್: www.bemlindia.in

**ಡಿಸಂಬರ್ 31, 2025ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳ ಸ್ವತಂತ್ರ ಮತ್ತು ಕ್ರೂಢೀಕರಿಸಿದ ಲೆಕ್ಕ ಪರಿಶೋಧನೆಗೊಳ್ಳದ ಹಣಕಾಸು ಫಲಿತಾಂಶದ ಸಂಕ್ಷಿಪ್ತ ವರದಿ**

(ರೂ. ಲಕ್ಷಗಳಲ್ಲಿ ಇಪಿಎಸ್ ಹೊರತುಪಡಿಸಿ)

| ಕ್ರ. ಸಂ. | ವಿವರಗಳು | ಸ್ವತಂತ್ರ | | | | ಕ್ರೂಢೀಕರಿಸಿದ | | | |
|---|---|---|---|---|---|---|---|---|---|
| | | 31.12.2025ಕ್ಕೆ ಕೊನೆಗೊಂಡ 3 ತಿಂಗಳು | 31.12.2025ಕ್ಕೆ ಕೊನೆಗೊಂಡ ಒಂಬತ್ತು ತಿಂಗಳು | 31.12.2024ಕ್ಕೆ ಕೊನೆಗೊಂಡ 3 ತಿಂಗಳು | 31.03.2025ಕ್ಕೆ ಕೊನೆಗೊಂಡ ವರ್ಷ | 31.12.2025ಕ್ಕೆ ಕೊನೆಗೊಂಡ 3 ತಿಂಗಳು | 31.12.2025ಕ್ಕೆ ಕೊನೆಗೊಂಡ ಒಂಬತ್ತು ತಿಂಗಳು | 31.12.2024ಕ್ಕೆ ಕೊನೆಗೊಂಡ 3 ತಿಂಗಳು | 31.03.2025ಕ್ಕೆ ಕೊನೆಗೊಂಡ ವರ್ಷ |
| | | ಪರಿಶೋಧನೆಗೊಳ್ಳದ | ಪರಿಶೋಧನೆಗೊಳ್ಳದ | ಪರಿಶೋಧನೆಗೊಳ್ಳದ | ಪರಿಶೋಧನೆಗೊಂಡ | ಪರಿಶೋಧನೆಗೊಳ್ಳದ | ಪರಿಶೋಧನೆಗೊಳ್ಳದ | ಪರಿಶೋಧನೆಗೊಳ್ಳದ | ಪರಿಶೋಧನೆಗೊಂಡ |
| 1. | ಕಾರ್ಯಾಚರಣೆಗಳ ಒಟ್ಟು ಆದಾಯ | 1,08,327 | 2,55,635 | 87,577 | 4,02,222 | 1,08,327 | 2,55,635 | 87,577 | 4,02,222 |
| 2 | ಅವಧಿಯ ನಿವ್ವಳ ಲಾಭ/(ನಷ್ಟ) (ತೆರಿಗೆ, ಅಸಾಧಾರಣ ಮತ್ತು /ಅಥವಾ ಅಸಾಮಾನ್ಯ ಅಂಶಗಳ ಮೊದಲು) | (2,573) | (4,574) | 2,995 | 40,543 | (2,541) | (4,539) | 2,958 | 40,376 |
| 3. | ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಅಂಶಗಳ ನಂತರ) | (2,573) | (4,574) | 2,995 | 40,543 | (2,541) | (4,539) | 2,958 | 40,376 |
| 4. | ತೆರಿಗೆಯ ನಂತರದ ಅವಧಿಗೆ ನಿವ್ವಳ ಲಾಭ/(ನಷ್ಟ) (ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಅಂಶಗಳ ನಂತರ) | (2,270) | (3,181) | 2,477 | 29,419 | (2,238) | (3,846) | 2,441 | 29,252 |
| 5. | ಅವಧಿಗೆ ಒಟ್ಟು ಸಮಗ್ರ ಆದಾಯ [ಅವಧಿಯ ಲಾಭ / (ನಷ್ಟ) (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)] | (2,347) | (3,894) | 2,415 | 29,650 | (2,315) | (4,558) | 2,379 | 29,484 |
| 6. | ಪೈಡ್ ಅಪ್ ಈಕ್ವಿಟಿ ಷೇರು ಬಂಡವಾಳ | 4,164 | 4,164 | 4,164 | 4,164 | 4,164 | 4,164 | 4,164 | 4,164 |
| 7. | ಮೀಸಲು (ಮರುಮೌಲ್ಯಮಾಪನ ಮೀಸಲು ಹೊರತುಪಡಿಸಿ) | 2,70,579 | 2,70,579 | 2,53,699 | 2,81,219 | 2,72,985 | 2,72,985 | 2,68,090 | 2,84,512 |
| 8. | ಭದ್ರತಾ ಪ್ರೀಮಿಯಂ ಖಾತೆ | 61,204 | 61,204 | 61,204 | 61,204 | 61,204 | 61,204 | 61,204 | 61,204 |
| 9. | ನಿವ್ವಳ ಮೌಲ್ಯ | 2,74,756 | 2,74,756 | 2,57,877 | 2,85,396 | 2,77,162 | 2,77,162 | 2,72,267 | 2,88,689 |
| 10. | ಪಾವತಿಸಿದ ಸಾಲದ ಬಂಡವಾಳ / ಬಾಕಿ ಇರುವ ಸಾಲ | – | – | – | – | – | – | – | – |
| 11. | ಬಾಕಿ ಇರುವ ಗಳಿಸಬಹುದಾದ ಆದ್ಯತೆಯ ಷೇರುಗಳು | – | – | – | – | – | – | – | – |
| 12. | ಸಾಲದ ಈಕ್ವಿಟಿ ಅನುಪಾತ | 0.34 | 0.34 | 0.25 | 0.08 | 0.34 | 0.34 | 0.24 | 0.08 |
| 13 | ಪ್ರತಿ ಷೇರಿನ ಗಳಿಕೆ* (ಪ್ರತಿ ಷೇರು ರೂ. 5/–) (ಮುಂದುವರಿಯುವ ಮತ್ತು ಸ್ಥಗಿತಗೊಂಡ ಕೆಲಸಗಳಿಗಾಗಿ) | | | | | | | | |
| | 1. ಮೂಲಭೂತವಾದದ್ದು: | (2.73) | (3.82) | 2.97 | 35.32 | (2.69) | (4.62) | 2.93 | 35.12 |
| | 2. ದುರ್ಬಲಗೊಳಿಸಲಾದದ್ದು | (2.73) | (3.82) | 2.97 | 35.32 | (2.69) | (4.62) | 2.93 | 35.12 |
| 14 | ಕ್ಯಾಪಿಟಲ್ ರಿಡೆಂಪ್ಷನ್ ರಿಸರ್ವ್ | – | – | – | – | – | – | – | – |
| 15 | ಡಿಬೆಂಚ್ಯರ್ ರಿಡೆಂಪ್ಷನ್ ರಿಸರ್ವ್ | – | – | – | – | – | – | – | – |
| 16 | ಸಾಲ ಸೇವಾ ವ್ಯಾಪ್ತಿ ಅನುಪಾತ | 0.61 | 1.49 | 3.91 | 9.78 | 0.64 | 1.50 | 3.88 | 9.75 |
| 17 | ಬಡ್ಡಿ ಸೇವಾ ವ್ಯಾಪ್ತಿ ಅನುಪಾತ | (1.22) | (0.46) | 2.79 | 8.46 | (1.19) | (0.45) | 2.77 | 8.43 |

* 03.11.2025 ರಂದು ಈಕ್ವಿಟಿ ಷೇರುಗಳ ವಿಭಜನೆಯ ಪರಿಣಾಮವಾಗಿ ಹಿಂದಿನ ಎಲ್ಲಾ ಅವಧಿಗಳಿಗೆ ಹೊಂದಿಸಲಾಗಿದೆ.

**ಟಿಪ್ಪಣಿ:** LODR ನಿಯಮಾವಳಿಗಳ 33ನೇ ನಿಯಮದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಹಣಕಾಸು ಫಲಿತಾಂಶಗಳ ವಿವರವಾದ ಸ್ವರೂಪದ ಸಾರವನ್ನು ಮೇಲೆ ನೀಡಲಾಗಿದೆ. ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಹಣಕಾಸು ಫಲಿತಾಂಶಗಳ ಸಂಪೂರ್ಣ ವಿವರಗಳು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲಿ NSE www.nseindia.com ನಲ್ಲಿ BSE www.bseindia.com ನಲ್ಲಿ ಮತ್ತು ಕಂಪನಿಯ ವೆಬ್‌ಸೈಟ್ www.bemlindia.in ನಲ್ಲಿ ಲಭ್ಯವಿದೆ.

ಸ್ಥಳ : ಬೆಂಗಳೂರು
ದಿನಾಂಕ : 06-02-2026

ಮಂಡಳಿಯ ಆದೇಶದ ಮೇರೆಗೆ
ಬಿಇಎಂಎಲ್ ಲಿಮಿಟೆಡ್ ಪರವಾಗಿ
ಸಹಿ/–
(ಶಾಂತನು ರಾಯ್)
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು.
Ro.No.1538